ಒಂದು ಉಯ್ಯಾಲೆಯನ್ನು ತೋರಿಸುತ್ತದೆ. ಮರುಕ್ಷಣ ಆ ಉಯ್ಯಾಲೆಯಲ್ಲಿ ಕೂತಿರುವ ಕಮಲಾಕ್ಷಿ ತಾನು ಅನುಭವಿಸಬೇಕಾಗಿ ಬಂದ ಕಷ್ಟಗಳನ್ನು ತನಗೆ ತಾನೇ ನಿವೇದಿಸಿಕೊಳ್ಳುತ್ತಿರುವ ಹಾಗೆ ಮಾತಾಡುತ್ತ ಗಳಗಳನೆ ಅಳುತ್ತಿರುವ ದೃಶ್ಯ. ಒಂದೆರಡು ಕ್ಷಣ ಅಷ್ಟೆ. ಇದ್ದಕ್ಕಿದ್ದಂತೆ ಇಡೀ ತೆರೆಯನ್ನು ತುಂಬಿಕೊಳ್ಳುವಷ್ಟು ದೊಡ್ಡದಾದ ಒಂದು ಕೈಯಿ ನಮಗೇ ಗುರಿಯಿಡುತ್ತಿರುವ ಒಂದು ಪಿಸ್ತೂಲನ್ನು ತೋರಿಸುತ್ತದೆ.

ಧನಂಜಯ ಸರಕ್ಕನೆ ಮೇಲೆದ್ದು ತಮ್ಮ ಎರಡೂ ಕೈಗಳನ್ನು ಅಂಗಲಾಚುವಂತೆ ಬೆಳ್ಳಿತೆರೆಗೆ ಅಡ್ಡವಾಗಿ ಹಿಡಿದು ಸಣ್ಣಗೆ ನರಳಿದರು. ಆದರೆ ಬೆಳ್ಳಿತೆರೆ ಕಣ್ಣು ಮುಚ್ಚಿ ತೆರೆಯುವಷ್ಟು ಕ್ಷಣ ಬೆಳಕಿನಿಂದ ಝಗಮಗಿಸಿ ನಂದಿಹೋಯಿತು. ಆಮೇಲೆ ಕೆಳಗೆ ಕುಸಿದುಬಿದ್ದಿದ್ದ ಧನಂಜಯರನ್ನು ನಾನು ಮೇಲಕ್ಕೆತ್ತುತ್ತಿದ್ದೆ. ಅವರೋ, ನಾನು ಮೇಲಕ್ಕೆತ್ತಿದಷ್ಟೂ ನುಣುಚಿಕೊಂಡು ಕೆಳಗೆ ಬೀಳುತ್ತಿದ್ದರು. ಅವರ ಎಡಬದಿಯ ಹಣೆಯಲ್ಲಾದ ಒಂದು ರಂಧ್ರದಿಂದ ಬುಳಬುಳನೆ ರಕ್ತ ಸುರಿಯುತ್ತಿದ್ದದ್ದು ನನ್ನ ಭ್ರಮೆಯಿರಲಿಕ್ಕಿಲ್ಲ.

ಅಂದು ನಾನು ಆ ಥಿಯೇಟರಿನಿಂದ ಹುಚ್ಚು ಹಿಡಿದವನಂತೆ ಹೊರಕ್ಕೆ ಓಡಿರಬೇಕು. ಆಮೇಲೆ ಪೊಲೀಸ್ ಸ್ಟೇಷನ್ನಿನಲ್ಲಿ ಇನ್‌ಸ್ಪೆಕ್ಟರೊಬ್ಬರ ಮುಂದೆ ಕೂತು ಗಡಗಡನೆ ನಡುಗುತ್ತ, ಏದುಸಿರುಬಿಡುತ್ತ ಹರಕುಮುರುಕು ಮಾತುಗಳಲ್ಲಿ ನನ್ನ ಕಥೆ ಹೇಳುತ್ತಿದ್ದಿರಬೇಕು. ನಾನು ಏನೇನಾಯಿತೆಂದು ಒಂದೇ ಉಸಿರಿಗೆ ಹೇಳಿದ್ದನ್ನೆಲ್ಲ ಹುಬ್ಬುಗಂಟಿಕ್ಕಿಕೊಂಡು ಕೇಳಿಸಿಕೊಂಡ ಆ ಇನ್‌ಸ್ಪೆಕ್ಟರ್ ಏನನ್ನೂ ನಂಬಿದಂತೆ ಕಾಣಲಿಲ್ಲ. ಆದರೂ ತಮ್ಮ ಜೀಪಿನಲ್ಲಿ ನನ್ನನ್ನೂ ಕೂರಿಸಿಕೊಂಡು ಆ ಬೀದಿಯನ್ನು ತಲಪಿ ಏಳೆಂಟು ಪ್ರದಕ್ಷಿಣೆ ಹಾಕಿದರು. ಆಗ ಪ್ರಕಾಶಮಾನವಾದ ಬೀದಿದೀಪಗಳಿದ್ದವು. ಎರಡೂ ಬದಿಗಳಲ್ಲಿದ್ದ ದೊಡ್ಡ ದೊಡ್ಡ ಅಂಗಡಿಗಳು ನಿಯಾನ್ ದೀಪಗಳಿಂದ ಝಗಮಗಿಸುತ್ತಿದ್ದವು. ಅವುಗಳ ಬೆಳಕಿನಲ್ಲಿ ಎಷ್ಟು ಹುಡುಕಿದರೂ ಆ ಕಟ್ಟಡವಾಗಲೀ ಬಾಂಬೆ ಬಯೋಸ್ಕೋಪ್ ಎಂಬ ಬೋರ್ಡಾಗಲೀ ಕಾಣದೆ ಹೋದಾಗ ಅವರು ಆದಷ್ಟೂ ತಮ್ಮ ಕೋಪವನ್ನು ಹತ್ತಿಕ್ಕಿಕೊಂಡು,'ಏನು ಗುರೂ, ಇನ್ನೂ ಏಳೂವರೆ ಕೂಡ ಇಲ್ಲ, ಆಗಲೇ ಮೈಮೇಲೆ ದೇವರು ಬಂದುಬಿಟ್ಟಿದಾನೆ' ಎಂದು ಜೋರಾಗಿ ನಕ್ಕರು.

ಆಮೇಲೆಂದೂ ನನಗೆ ಧನಂಜಯರು ಸಿಕ್ಕಲಿಲ್ಲ. ಇಪ್ಪತ್ತು– ಇಪ್ಪತ್ತೈದು ವರ್ಷಗಳ ಹಿಂದೆ ಕೆಲವು ಪತ್ರಿಕೆಗಳು ಅವರು ನಾಪತ್ತೆಯಾದರೆಂದೋ ಹಠಾತ್ತಾಗಿ ತೀರಿಕೊಂಡರೆಂದೋ ವರದಿ ಮಾಡಿದ ನೆನಪು. ಈಗ ಅಷ್ಟು ಹಳೆಯ ನೆನಪನ್ನು ನೆಚ್ಚಿಕೊಳ್ಳುವುದಾದರೂ ಹೇಗೆ?

ಮೊನ್ನೆ ಮೊನ್ನೆ ನಾನು ಯಾವುದೋ ಕೆಲಸದ ಮೇಲೆ ಮಹಾತ್ಮ ಗಾಂಧಿ ರಸ್ತೆಗೆ ಹೋದಾಗ ಅಲ್ಲಿ ನನ್ನ ಮಿತ್ರರು ಸಿಕ್ಕಿದರು. ಆಗಲೇ ಸಂಜೆಯ ದೀಪಗಳು ಹೊತ್ತಿಕೊಳ್ಳುವ ಹೊತ್ತು. ಅದೂ ಇದೂ ಮಾತಾದ ಮೇಲೆ ಆ ಮಿತ್ರರು ಕಮರ್ಷಿಯಲ್ ಸ್ಟ್ರೀಟಿಗೆ ಹತ್ತಿರದಲ್ಲೇ ಒಂದು ಹೊಟೇಲಾಗಿದೆಯೆಂದೂ ಆ ಹೋಟೆಲಿನ ಮಸಾಲೆದೋಸೆಯ ರುಚಿಯೇ ರುಚಿಯೆಂದೂ ಹೇಳಿ ನನ್ನ ಬಾಯಿಯಲ್ಲಿ ನೀರೂರಿಸಿದರು. ಸರಿ, ಹೋಗೋಣ, ವಾಕ್ ಮಾಡಿದ ಹಾಗೂ ಆಯಿತು ಎಂದು ಮೂವರೂ ಹೊರಟೆವು. ನಮ್ಮಲ್ಲೊಬ್ಬರು, ಯಾಕೋ ಏನೋ, ಇದ್ದಕ್ಕಿದ್ದಂತೆ ಎಂ.ಎಸ್.ಕೆ. ಪ್ರಭು ಅವರ ಕಥೆಗಳನ್ನು ಪ್ರಸ್ತಾಪಿಸಿದ್ದೇ ನಾವು ಅದೆಷ್ಟು ಆಳವಾಗಿ ಆ ಕಥೆಗಳಲ್ಲಿ ಮುಳುಗಿಹೋದೆವೆಂದರೆ ದಾರಿ ಸಾಗಿದ್ದೇ ತಿಳಿಯಲಿಲ್ಲ. ಕೆಲವೇ ನಿಮಿಷಗಳಲ್ಲಿ ಕಮರ್ಷಿಯಲ್ ಸ್ಟ್ರೀಟನ್ನೂ ದಾಟಿ ಹೊಸದೊಂದು ರಸ್ತೆಗೆ ಕಾಲಿಟ್ಟದ್ದೇ ನನಗೆ, ಅರೆ, ಇದು ಅದೇ ಬೀದಿಯಲ್ಲವೇ ಎಂದು ಅಚ್ಚರಿಯಾಗಿ ಮೈಯಲ್ಲಿ ಮುಳ್ಳುಗಳೆದ್ದವು. ನನ್ನ ಅದೃಷ್ಟಕ್ಕೆ ಕರೆಂಟೂ ಹೋಯಿತು. ಆಮೇಲೆ ಕಣ್ಣಲ್ಲಿ ಕಣ್ಣಿಟ್ಟು ಎಷ್ಟು ಹುಡುಕಿದರೂ ಆ ಕಟ್ಟಡ ಮಾತ್ರ ಕಾಣಿಸಲಿಲ್ಲ. ಅದೇ ಇಲ್ಲದ ಮೇಲೆ ಅವತ್ತು ನಮ್ಮನ್ನು ಥಿಯೇಟರಿನೊಳಕ್ಕೆ ಕಳಿಸಿದ ಆ ಮುದುಕನನ್ನು ಕಟ್ಟಿಕೊಂಡು ಏನಾಗಬೇಕು? ಆದರೂ ನನ್ನ ಕಣ್ಣು ಅವನು ಅಲ್ಲೆಲ್ಲಾದರೂ ಕಾಣಿಸಬಹುದೆಂದು ಹುಡುಕಿತು. ಇಲ್ಲ, ಅವನ ಪತ್ತೆಯಾಗಲಿಲ್ಲ.

●